ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1311

ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 24-12-2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಆಯುಕ್ತರ ಕಛೇರಿಯಲ್ಲಿ ನೋಂದಣಿಯಾದ ಎಂ.ಸಿ, ಎಲ್.ಎಮ್.ವಿ, ಹೆಚ್.ಜಿ. ಎಮ್.ವಿ ವಾಹನಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು, ವಾಹನವಾರು ಮಾಹಿತಿ ಯನ್ನು ನೀಡುವುದು)	ಉಡುಪಿ ಪ್ರಾದೇಶಿಕ ಸಾರಿಗೆ ಕಛೇರಿ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ನೋಂದಣಿಯಾದ ಎಂ.ಸಿ, ಎಲ್.ಎಮ್.ವಿ, ಹೆಚ್.ಜಿ. ಎಮ್. ವಿ ವಾಹನಗಳ ಸಂಖ್ಯೆಯ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
ಆ.	ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ ಹೊಸದಾಗಿ ನೋಂದಣಿಯಾದ ಎಂ.ಸಿ, ಎಲ್.ಎಮ್.ವಿ, ಹೆಚ್.ಜಿ.ಎಮ್.ವಿ ವಾಹನಗಳ ಸಂಖ್ಯೆ ಎಷ್ಟು (ವರ್ಷವಾರು, ತಾಲ್ಲೂಕುವಾರು, ವಾಹನವಾರು ಮಾಹಿತಿಯನ್ನು ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಜಿಲ್ಲೆಯಲ್ಲಿ ಹೊಸದಾಗಿ ನೋಂದಣಿಯಾದ ಎಂ.ಸಿ, ಎಲ್.ಎಮ್.ವಿ, ಹೆಚ್.ಜಿ.ಎಮ್.ವಿ ವಾಹನಗಳ ಸಂಖ್ಯೆಯ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.
ಇ.	ಜಿಲ್ಲೆಯಲ್ಲಿ ಅತಿ ಹೆಚ್ಚು ವಾಹನಗಳು ನೋಂದಣಿ ಯಾಗುವ ಅವಿಭಜಿತ ಕುಂದಾಪುರ ತಾಲ್ಲೂಕಿನಲ್ಲಿ ಖಾಯಂ ಪ್ರಾದೇಶಿಕ ಸಾರಿಗೆ ಆಯುಕ್ತರ ಕಛೇರಿ ಸ್ಥಾಪಿಸುವ ಪ್ರಸ್ತಾವನೆಯು ಯಾವ ಹಂತದಲ್ಲಿದೆ: ಈ ಕುರಿತು ಇಲಾಖೆಯಿಂದ ಸ್ಥಳ ಗುರುತಿಸ ಲಾಗಿದೆಯೇ; ಜನರ ಬಹುಕಾಲದ ಬೇಡಿಕೆಯನ್ನು ಸರ್ಕಾರ ಯಾವ ಕಾಲಮಿತಿ ಯಲ್ಲಿ ಈಡೇರಿಸುವುದು?	ಕುಂದಾಪುರ ತಾಲ್ಲೂಕಿನಲ್ಲಿ ಹೊಸದಾಗಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಕಛೇರಿಯನ್ನು ಸ್ಥಾಪಿಸುವ ಕುರಿತಂತೆ ಆರ್ಥಿಕ ಇಲಾಖೆಯು ಕುಂದಾಪುರ ಮತ್ತು ಬೈಂದೂರು ತಾಲ್ಲೂಕು ವ್ಯಾಪ್ತಿಯಲ್ಲಿ ನೋಂದಣಿಯಾಗಿರುವ ವಾಹನಗಳ ಬಗ್ಗೆ ಹೆಚ್ಚುವರಿ ಮಾಹಿತಿಯನ್ನು ಕೋರಿರುತ್ತದೆ. ಸಾರಿಗೆ ಆಯುಕ್ತರು, ಸರ್ಕಾರಕ್ಕೆ ಬರೆದ ದಿನಾಂಕ: 17-12-2021ರ ಪತ್ರದಲ್ಲಿ ನೊಂದಣಿಯಾಗಿರುವ ವಾಹನಗಳ ಬಗ್ಗೆ ಮಾಹಿತಿಯನ್ನು ಸಲ್ಲಿಸಿದ್ದು, ಹೊಸದಾಗಿ ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಯನ್ನು ತೆರೆಯುವ ಸಂಬಂಧ ನಿಗದಿಪಡಿಸಿರುವ ಮಾನದಂಡಗಳನ್ನು ಹಾಗೂ ಆರ್ಥಿಕ ಪರಿಣಾಮಗಳನ್ನು ಪರಿಗಣಿಸಿ ಕುಂದಾಪುರ ತಾಲ್ಲೂಕಿನಲ್ಲಿ ಹೊಸದಾಗಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯನ್ನು ಪ್ರಾರಂಭಿಸುವ ಬಗ್ಗೆ ನಿಯಮಾನುಸಾರ ಅಗತ್ಯಕ್ರಮ ವಹಿಸಲಾಗುವುದು.

ಟಿಡಿ 125 ಟಿಡಿಕ್ಯೂ 2021

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ ಕಲ್ಯಾಣ ಸಚಿವರು.

ಪ್ರ.ಸಂ: 1311 ಕ್ಕೆ

ಅನುಬಂಧ-1

ಉಡುಪಿ ಪ್ರಾದೇಶಿಕ ಸಾರಿಗೆ ಕಛೇರಿ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾದೇಶಿಕ / ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ನೋಂದಣಿಯಾದ ಎಂ.ಸಿ, ಎಲ್. ಎಮ್. ವಿ, ಹೆಚ್ . ಜಿ. ಎಮ್. ವಿ ವಾಹನಗಳ ಸಂಖ್ಯೆಯ ವಿವರಗಳು. (31-03-2021ರ ಅಂತ್ಯಕ್ಕೆ)

ಕ್ರ. ಸಂ.	ಜಿಲ್ಲೆ	ಉಸಾಆ& ಹಿಪ್ರಾಸಾಕ/ ಪ್ರಾದೇಶಿಕ / ಸಪ್ರಾಸಾಕ ಹೆಸರು	ಎಂ.ಸಿ.	ಎಲ್.ಎಂ.ವಿ.	ಹೆಚ್.ಜಿ.ಎಂ.ವಿ.
1.	ಉಡುಪಿ	ಪ್ರಾಸಾಕ, ಉಡುಪಿ	346655	81912	6381
2.	ದಕ್ಷಿಣ ಕನ್ನಡ	1. ಉಸಾಆ & ಹಿಪ್ರಾಸಾಕ, ಮಂಗಳೂರು	374251	133779	15382
		2. ಪ್ರಾಸಾಕ, ಪುತ್ತೂರು	131012	48972	3960
		3. ಸಪ್ರಾಸಾಕ, ಬಂಟ್ವಾಳ	142996	42452	3654
		ಒಟ್ಟು	**994914**	**307115**	**29377**

ಅನುಬಂಧ-2

ಕಳೆದ ಮೂರು ವರ್ಷಗಳಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸದಾಗಿ ನೋಂದಣಿಯಾದ ಎಂ.ಸಿ, ಎಲ್. ಎಮ್. ವಿ, ಹೆಚ್ . ಜಿ. ಎಮ್. ವಿ ವಾಹನಗಳ ವರ್ಷವಾರು ವಿವರಗಳು

ಕ್ರ. ಸಂ.	ಜಿಲ್ಲೆ	ಎಂ.ಸಿ.			ಎಲ್.ಎಂ.ವಿ.			ಹೆಚ್.ಜಿ.ಎಂ.ವಿ.		
		2018-19	2019-20	2020-21	2018-19	2019-20	2020-21	2018-19	2019-20	2020-21
1.	ಉಡುಪಿ	21423	18657	18370	5807	4688	4833	6	10	16
2.	ದಕ್ಷಿಣ ಕನ್ನಡ	46801	40263	36414	12459	10558	10300	30	01	11
	ಒಟ್ಟು	**68224**	**58920**	**54784**	**18266**	**15246**	**15133**	36	**11**	**27**